ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಯುಬಿಸಿ-5/84/ಸಮಾಪನೆ/ಟ್ಯಾಫ್‌ಕಬ್/2016-17 ದಿನಾಂಕ: 22-01 -2018

:: ಸುತ್ತೋಲೆ ::

ವಿಷಯ:- ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಿರುವ ಆಪದ್ಧನ ನಿಧಿಯನ್ನು ಹಿಂಪಡೆಯಲು ಅವಕಾಶ ನೀಡದಿರುವ ಬಗ್ಗೆ.

ಉಲ್ಲೇಖ;- ಟ್ಯಾಫ್‌ಕಬ್ ಮೀಟಿಂಗ್ ದಿನಾಂಕ:12-12-2017.

=====

ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳು ತಾವು ಹೊಂದಿರುವ ಆಪದ್ಧನ ನಿಧಿಯನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ ಮಾಡುತ್ತಿದ್ದು, ಈ ಹೂಡಿಕೆಯನ್ನು ಸಾಮಾನ್ಯ ಠೇವಣಿ ಎಂದು ಪರಿಗಣಿಸಲು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನಿರಾಕರಿಸುತ್ತಿದ್ದು, ತತ್ಪರಿಣಾಮವಾಗಿ ಪಟ್ಟಣ ಸಹಕಾರ ಬ್ಯಾಂಕುಗಳು ಸಂಕಷ್ಟವನ್ನು ಎದುರಿಸುತ್ತಿವೆ ಎಂಬ ವಿಷಯವು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ನಡೆದ ಟ್ಯಾಪ್‌ಕಬ್ ಸಭೆಯಲ್ಲಿ ಚರ್ಚಿತವಾಗಿದೆ.

ಅಲ್ಲದೇ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಈ ನಿಲುವು ಈ ಕಛೇರಿಯ ಗಮನಕ್ಕೂ ಸಹ ಬಂದಿರುತ್ತದೆ. ಸಹಕಾರ ಕ್ಷೇತ್ರದ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲನೆ ಮಾಡಬೇಕು, ಅಲ್ಲದೆ ಬ್ಯಾಂಕಿಂಗ್ ವಿನಿಯಮನ ಅಧಿನಿಯಮ 1949 ಎಲ್ಲಾ ಬ್ಯಾಂಕುಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮನದಟ್ಟು ಮಾಡಿಕೊಳ್ಳುವುದು ಅಗತ್ಯ.

ಇನ್ನು ಮುಂದೆ ಪಟ್ಟಣ ಸಹಕಾರ ಬ್ಯಾಂಕುಗಳು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಆಪದ್ಧನ ಹಣ ನಿಧಿಯನ್ನು ಹೂಡಿಕೆ ಮಾಡಿದ ಸಂದರ್ಭದಲ್ಲಿ, ಹೂಡಿಕೆ ಮಾಡಿದ ಬ್ಯಾಂಕಿನ ಕೋರಿಕೆ ಬಂದಲ್ಲಿ ಅಂತಹ ಹೂಡಿಕೆಯನ್ನು ಸಾಮಾನ್ಯ ಠೇವಣಿ ಎಂದು ಪರಿಗಣಿಸುವುದು. ಅಪೆಕ್ಸ್ ಬ್ಯಾಂಕ್ ಹಾಗೂ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಈ ಮೂಲಕ ಸೂಚಿಸಿದೆ. ಅಲ್ಲದೆ ಪಟ್ಟಣ ಸಹಕಾರ ಬ್ಯಾಂಕುಗಳು ಲಾಭ ಗಳಿಕೆ ದೃಷ್ಟಿಯಿಂದ ವಿವೇಚನಯುಕ್ತ ಹೂಡಿಕೆ ಮಾಡಲು ಮುಂದಾದಾಗ ಪೂರ್ಣ ಪ್ರಮಾಣದ ಸಹಕಾರ ನೀಡಲು ನಿರ್ದೇಶಿಸಿದೆ.

(ಎಂ.ಕೆ.ಅಯ್ಯಪ್ಪ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,.

1) ವ್ಯವಸ್ಥಾಪಕ ನಿರ್ದೇಶಕರು,

----------------- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

2) ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರು,

- ------------ ಪಟ್ಟಣ ಸಹಕಾರ ಬ್ಯಾಂಕ್

-------------

------------ --

3) ಸಹಕಾರ ಸಂಘಗಳ ಜಂಟಿ ನಿಬಂಧಕರು,

----------- ಪ್ರಾಂತ --------

3) ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,

-------- ಜಿಲ್ಲೆ -----------

4) ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು,

---------------- ಉಪ ವಿಭಾಗ.

<u>ಪ್ರತಿಯನ್ನು:</u>

1) ಪ್ರಧಾನ ವ್ಯವಸ್ಥಾಪಕರು, ಡಿಸಿಬಿಎಸ್, ಭಾರತೀಯ ರಿಜರ್ವ್ ಬ್ಯಾಂಕ್, ನೃಪತುಂಗ ರಸ್ತೆ ಬೆಂಗಳೂರು.

2) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132, ಕೆ.ಹೆಚ್.ರಸ್ತೆ, ಬೆಂಗಳೂರು-27 ರವರಿಗೆ ಕಳುಹಿಸಿದೆ.